ದಿನಾಂಕಃ **27.09.2024**

ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ನೀಡಲಾಯ್ತು.

ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ವಕೀಲರಿಂದಃ-

ನಾಗಮ್ಮನ ತವರೂರು ನಿಂಬೆಗುಂಡಿ. 6 ಮತ್ತು 7 ನೇ ಪ್ರತಿವಾದಿಯರು ಸಲ್ಲಿಸಿದ ಪ್ರತಿವಾದ ಪತ್ರವನ್ನು ಓದಿ ತಿಳಿದುಕೊಂಡಿದ್ದೇನೆ. ನಾಗಮ್ಮನ ತವರೂರು ಹೊನ್ನಾಳಿ ತಾಲ್ಲೂಕಿನ ದೊಡ್ಡತ್ತಿ (ಪ್ರಸ್ತುತ ನ್ಯಾಮತಿ ತಾಲ್ಲೂಕು) ಎನ್ನುವುದು ಸರಿಯಲ್ಲ. ಹಿರಿಯಮ್ಮನಿಗೆ ಅಂದರೆ 3 ನೇ ಪ್ರತಿವಾದಿಗೆ ಪೌತಿ ಆಧಾರದಲ್ಲಿ ಅವರ ಹೆಸರಿಗೆ ಖಾತೆ ಬಂತು ಎನ್ನುವುದು ಸರಿಯಲ್ಲ. ದುರ್ಗಮ್ಮ, ನಾಗಮ್ಮ, ಹುಲುಗಮ್ಮ, ದ್ಯಾವಪ್ಪ, ಕೊಟ್ರಪ್ಪ, ಹಿರಿಯಮ್ಮ ರವರ ಸಕ್ಸೆಷನ್ ಸರ್ಟಿಫಿಕೇಟನ್ನು ನಾನು ಹಾಜರುಪಡಿಸಿಲ್ಲ. ಸಕ್ಸೆಷನ್ ಸರ್ಟಿಫಿಕೇಟ ಕೊಡಲು ನನಗೆ ಯಾವುದೇ ತೊಂದರೆ ಇಲ್ಲ. ಉತ್ತರಾಧಿಕಾರ ಪತ್ರ ಹಾಜರುಪಡಿಸಲು ನನಗೆ ತೊಂದರೆ ಇಲ್ಲ. ಸಾಕ್ಷಿ ಮುಂದುವರೆದು ಅದನ್ನು ಹಾಜರುಪಡಿಸುವುದು ನನಗೆ ಸಂಬಂಧವಿಲ್ಲ ಎಂದು ಹೇಳಿ, ಬೇಕಾದರೆ ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ.

ಲೋಕಪ್ಪ ತೀರಿದ ನಂತರ ಉತ್ತರಾಧಿಕಾರ ಪತ್ರವನ್ನು ನಾನು ತೆಗೆದುಕೊಂಡಿಲ್ಲ. ಹುಲುಗಮ್ಮ ತೀರಿದ ನಂತರ ನಾಗಮ್ಮ, ಲೋಕಪ್ಪ ಅವರ ಲೀಗಲ್ ಹೇರ್ಸ್ ನಲ್ಲಿ ಬರುತ್ತಾರೆ. ಕೊಟ್ರಪ್ಪನ ಲೀಗಲ್ ಹೇರ್ಸ್ ಬಗ್ಗೆ ನನಗೆ ಗೊತ್ತಿಲ್ಲ. ಕೊಟ್ರಪ್ಪನ ಲೀಗಲ್ ಹೇರ್ಸ್ ಎಂದರೆ ಕೊಟ್ರಪ್ಪ, ಮಲ್ಲಮ್ಮ, ಹಿರಿಯಮ್ಮ, ಲಕ್ಷ್ಮಮ್ಮ ಮತ್ತು ಕೊಟ್ರಪ್ಪ ಎನ್ನುವುದು ಗೊತ್ತಿಲ್ಲ. ನಾಗಮ್ಮನಿಗೆ ಮಕ್ಕಳಿಲ್ಲ. ನಾಗಮ್ಮ ತೀರಿದ ನಂತರ ಲೋಕಪ್ಪನ ಹೆಸರಿಗೆ ಖಾತೆ ಆಯಿತು. ಸಾಕ್ಷಿ ಮುಂದುವರೆದು ನಾಗಮ್ಮ ವಿಲ್ ಬರೆದಿದ್ದಾರೆ ಎನ್ನುತ್ತಾರೆ. ಸರ್ವೆ ನಂಬರ್ 35 ನೇ ಆಸ್ತಿ ಲೋಕಪ್ಪನಿಗೆ ಬಂದಿದೆ. ಸದರಿ ದಾಖಲೆಯನ್ನು ಹಾಜರುಪಡಿಸಿದ್ದೇನೆ. ಸರ್ವೆ ನಂಬರ್ 35/1 25 ಗುಂಟೆಯ ಮ್ಯುಟೇಷನ್ ರಿಜಿಸ್ಟರ್ ಹಾಜರುಪಡಿಸಿದ್ದೇನೆ. ಅದು ಲೋಕಪ್ಪನಿಗೆ ನಾಗಮ್ಮನಿಗೆ ಹಿಸ್ಸೆ ಮೂಲಕ ಕೊಟ್ಟಿರುತ್ತಾರೆ. ಸದರಿ ಹಿಸ್ಸೆ ಪತ್ರವನ್ನು ನಾನು ಹಾಜರುಪಡಿಸಿಲ್ಲ. ಹಿಸ್ಸೆ ಪತ್ರ ಇಲ್ಲದೇ ನಾಗಮ್ಮ ದಾಖಲೆಗಳನ್ನು ಸೃಷ್ಟಿಸಿದ್ದಾರೆ ಎಂದರೆ ಸರಿಯಲ್ಲ. ನಿಪಿ 6 ರಲ್ಲಿ ಕಾಣಿಸಿರುವ ಒಕ್ಕಣೆಗಳು ಸರಿ ಇವೆ, ಸಾಕ್ಷಿ ಮುಂದುವರೆದು ಅದನ್ನು ಸೃಷ್ಟಿಸಿದ್ದಾರೆ ಎನ್ನುತ್ತಾರೆ. ಪೌತಿ ಖಾತೆಯ ಮೇರೆಗೆ ಹಿರಿಯಮ್ಮನಿಗೆ ಸರ್ವೆ ನಂಬರ್ 35/2 1 ಎಕರೆ 9 ಗುಂಟೆ ಬಂದಿರುತ್ತದೆ ಎನ್ನುವುದು ಸರಿಯಲ್ಲ. 1994-95 ರಿಂದ ಸದರಿ ಸರ್ವೆ ನಂಬರ್ ನ ಪಹಣಿ ಹಿರಿಯಮ್ಮನ ಹೆಸರಿಗೆ ಬರುತ್ತಿದೆ ಎಂದರೆ ಸರಿ.

ಈಗ ಸದರಿ ಸರ್ವೆ ನಂಬರ್ ನ ಪಹಣಿ 5 ನೇ ಪ್ರತಿವಾದಿ ಹೆಸರಿನಲ್ಲಿದೆ. 2002 ರಲ್ಲಿ 5 ನೇ ಪ್ರತಿವಾದಿ ಹೆಸರಿಗೆ ಖಾತೆ ಬದಲಾಯಿತು. ಇಲ್ಲಿವರೆಗೂ ಅವರ ಹೆಸರಿನಲ್ಲೇ ಇದೆ. 2002 ರಲ್ಲಿ ಆದ ಕ್ರಯಪತ್ರಕ್ಕೆ ನಾನು ಸಾಕ್ಷಿದಾರರಾಗಿರಲಿಲ್ಲ. ಅದಕ್ಕೆ ಯಾರ್ಯಾರು ಸಾಕ್ಷಿದಾರರಾಗಿದ್ದಾರೆ ಎಂದು ನನಗೆ ನೆನಪಿಲ್ಲ. ಸದರಿ ಆಸ್ತಿಯಲ್ಲಿ 6 ನೇ ಪ್ರತಿವಾದಿಯೇ ಸ್ವಾಧೀನದಲ್ಲಿದ್ದಾರೆ. ಅವರು ಬೋನಫೈಡ್ ಪರ್ಚೇಸರ್ ಎಂದರೆ ಸರಿ.

ಲಿಂಗಪ್ಪ ಎಂದರೆ ಹಿರಿಯಮ್ಮನ ಗಂಡ. ಅವರ ಹೆಸರು ನಿಪಿ 9 ರಲ್ಲಿದೆ. ನಿಪಿ 9 ರಲ್ಲಿ ನಾಗಮ್ಮನ ಹೆಸರು ಇದೆ. ಹಿರಿಯಮ್ಮನಿಗೆ ಸದರಿ ಆಸ್ತಿ ವಿಭಾಗದಿಂದ ಬಂದಿದೆ ಎನ್ನುವುದು ಸರಿಯಲ್ಲ. ಸಾಕ್ಷಿ ಅದನ್ನು ಸೃಷ್ಟಿಸಿದ್ದಾರೆ ಎನ್ನುವುದು ಸರಿಯಲ್ಲ. ನಿಪಿ 12 ನ್ನು ನಾನೇ ಹಾಜರುಪಡಿಸಿದ್ದೇನೆ. ಪ್ರಕಾಶ್ ಎಂಬುವವರಿಗೆ ಕ್ರಯಪತ್ರದ ಆಧಾರದ ಮೇಲೆ ನಿಪಿ 12 ಬಂದಿರುತ್ತದೆ. ನಿಪಿ 13 ರ ಪ್ರಕಾರ ಹಿರಿಯಮ್ಮನಿಗೆ ಪೌತಿ ಖಾತೆ ಮೂಲಕ ಬಂದಿದೆ ಎಂದರೆ ಸಾಕ್ಷಿ ಸೃಷ್ಟಿಸಿದ್ದಾರೆ ಎನ್ನುತ್ತಾರೆ. ಅದು ತಹಶೀಲ್ದಾರ್ ರವರ ಆದೇಶದ ಮೇರೆಗೆ ಬಂದಿದೆ ಎಂದರೆ ಸಾಕ್ಷಿ ಅದು ತಪ್ಪಾಗಿದೆ ಎನ್ನುತ್ತಾರೆ. ಸರ್ವೆ ನಂಬರ್ 151/7 3 ನೇ ಪ್ರತಿವಾದಿಯ ಹೆಸರಿನಲ್ಲಿದೆ. ನಿಪಿ 14 ಮತ್ತು 15 ಹಿರಿಯಮ್ಮನ ಹೆಸರಿನಲ್ಲಿದೆ. ಕಾಲಂ ನಂಬರ್ 12 ರಲ್ಲೂ ಸಹ ಅವರ ಹೆಸರು ಇದೆ.

2001 ರಲ್ಲಿ ನಾಗಮ್ಮ ತೀರಿಕೊಂಡರು. ನಾಗಮ್ಮ 1994 ರಲ್ಲಿ ತೀರಿಕೊಂಡರು ಎಂದು ನಾನು ದಾಖಲೆಯನ್ನು ಹಾಜರುಮಾಡಿಲ್ಲ. ಹಿರಿಯಮ್ಮ ತಹಶೀಲ್ದಾರ್ ರವರಿಗೆ ನಿಪಿ 16 ರಂತೆ ಅರ್ಜಿ ಕೊಟ್ಟಿದ್ದರು ಎನ್ನುವುದು ಸರಿ. ಹಿರಿಯಮ್ಮನಿಗೆ ಪಿತ್ರಾರ್ಜಿತವಾಗಿ ಹಕ್ಕು ಬರುತ್ತದೆ ಎನ್ನುವುದು ಸರಿಯಲ್ಲ. ಅದಕ್ಕಾಗಿಯೇ ರೆವಿನ್ಯೂ ನ್ಯಾಯಾಲಯಗಳಲ್ಲಿ ಅವರ ಪರ ಆದೇಶವಾಗಿತ್ತು ಎಂದರೆ ಸರಿಯಲ್ಲ. ಎಸಿ ನ್ಯಾಯಾಲಯದಲ್ಲಿ ಲೋಕಪ್ಪ ಪಾರ್ಟಿಯಾಗಿರಲಿಲ್ಲ. ಲೋಕಪ್ಪ ಎಸಿ ನ್ಯಾಯಾಲಯದಲ್ಲಿ ಪಾರ್ಟಿಯಾಗಿದ್ದರು ಎಂದರೆ ಸರಿ. 2010 ರಲ್ಲಿ ಲೋಕಪ್ಪ ತೀರಿದ. ಲೋಕಪ್ಪ ತೀರಿದ ನಂತರ ಈ ಪ್ರಕರಣದ 1 ಮತ್ತು 2 ನೇ ಪ್ರತಿವಾದಿಯರು ಮತ್ತು ವಾದಿಯರು ವಾರಸುದಾರರಾಗಿ ಸದರಿ ಪ್ರಕರಣದಲ್ಲಿ ಪಾರ್ಟಿಯಾದರು ಎನ್ನುವುದು ನನಗೆ ಗೊತ್ತಿಲ್ಲ. ಸದರಿ ವಿಚಾರ ಗೊತ್ತಿದ್ದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಿಲ್ಲನ್ನು ನಾವು ಸೃಷ್ಟಿ ಮಾಡಿದ್ದೇವೆ ಎನ್ನುವುದು ಸರಿಯಲ್ಲ.

1969 ರಲ್ಲಿ ಹುಲುಗಮ್ಮ ತೀರಿದರು. ನಿಪಿ 8 ಸೃಷ್ಟಿಸಿದ ದಾಖಲೆ ಎನ್ನುವುದು ಸರಿಯಲ್ಲ. 6 ಮತ್ತು 7 ನೇ ಪ್ರತಿವಾದಿಯರು 1972 ರಲ್ಲಿ ಹುಲುಗಮ್ಮ ತೀರಿದರು ಎಂದು ಹೇಳುತ್ತಾರೆ ಎಂದರೆ ಸರಿಯಲ್ಲ. ನನಗೆ ಇಂಗ್ಲೀಷ್ ಓದಲು ಬರೆಯಲು ಬರುವುದಿಲ್ಲ. ನಾನು ಪಿಯುಸಿ ವಿದ್ಯಾಭ್ಯಾಸ ಮಾಡಿದ್ದೇನೆ. ದ್ಯಾವಪ್ಪ ಓದಿಲ್ಲ. ಜಿಪಿಎ ನಲ್ಲಿ ಬರೆದ ವಿಷಯ ದ್ಯಾವಪ್ಪನಿಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. 8 ನೇ ಪ್ರತಿವಾದಿ ವಿರುದ್ಧ ತಹಶೀಲ್ದಾರ್ ರವರಿಗೆ ಒಂದು ಅರ್ಜಿ ಕೊಟ್ಟಿದ್ದರು ಎನ್ನುವುದು ಸರಿ. ಸಾಕ್ಷಿ ಸದರಿ ಅರ್ಜಿಯ ನಕಲನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಡಿ 1 ಎಂದು ಗುರುತಿಸಲಾಯಿತು. ಜಿಪಿಎ ಬರೆಸಿಕೊಂಡು ನಾವು ನ್ಯಾಯಾಲಯನ್ನು ತಪ್ಪುದಾರಿಗೆ ಎಳೆಯುತ್ತಿದ್ದೇನೆ ಎಂದರೆ ಸರಿಯಲ್ಲ. ಕೊಟ್ರಪ್ಪಗೆ ಹಿರಿಯಮ್ಮ ಏಕೈಕ ಪುತ್ರಿ ಎನ್ನುವುದು ನನಗೆ ಗೊತ್ತಿಲ್ಲ. 3 ನೇ ಪ್ರತಿವಾದಿ ನಮ್ಮ ಊರಿನವರೇ. ಹಿರಿಯಮ್ಮನಿಗೆ ವಯಸ್ಸಾದಾಗ ಅವರಿಗೆ ಆರೋಗ್ಯ ಸರಿ ಇರಲಿಲ್ಲ ಎಂದರೆ ಸಾಕ್ಷಿ ಓಡಾಡುತ್ತಿದ್ದರು ಎನ್ನುತ್ತಾರೆ. ದ್ಯಾವಪ್ಪ ಈಗ ಆರೋಗ್ಯವಾಗಿದ್ದಾರೆ ಎನ್ನುವುದು ಸರಿಯಲ್ಲ. ಹಿರಿಯಮ್ಮನ ಜೀವನ ಅವಶ್ಯಕತೆಗಾಗಿ 8 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎನ್ನುವುದು ಸರಿಯಲ್ಲ. ಅವರ ವೈದ್ಯಕೀಯ ವೆಚ್ಚಕ್ಕಾಗಿ ಸದರಿ ಆಸ್ತಿಗಳನ್ನು ಮಾರಾಟ ಮಾಡಿದ್ದಾರೆ ಎನ್ನುವುದು ಸರಿಯಲ್ಲ, 3 ನೇ ಪ್ರತಿವಾದಿಗೆ ಆಸ್ತಿಗಳ ಮೇಲೆ ಸಂಪೂರ್ಣ ಅಧಿಕಾರವಿತ್ತು ಆದ್ದರಿಂದ ಅವುಗಳನ್ನು ಮಾರಾಟ ಮಾಡಿದ್ದಾರೆ ಎನ್ನುವುದು ಸರಿಯಲ್ಲ. ಹಿರಿಯಮ್ಮ ಮಾರಾಟ ಮಾಡಿದ ನಂತರ 3 ನೇ ವಾದಿ ಮಾತ್ರ ಆರ್ ಆರ್

ಟಿ ಇಲಾಖೆಯಲ್ಲಿ ತಕರಾರು ಸಲ್ಲಿಸಿದರು ಎನ್ನುವುದು ಸರಿ. 3 ನೇ ವಾದಿಯ ತಕರಾರನ್ನು ಬದಿಗೊತ್ತಿ 8 ನೇ ಪ್ರತಿವಾದಿಯ ಪರ ಆದೇಶವಾಗಿದೆ ಎನ್ನುವುದು ಸರಿ. 8 ನೇ ಪ್ರತಿವಾದಿ ಅವರು ಖರೀದಿ ಮಾಡಿದ ಆಸ್ತಿಗಳಿಗೆ ಹಕ್ಕುದಾರರು ಮತ್ತು ಅನುಭೋಗದಾರರು ಎನ್ನುವುದು ಸರಿಯಲ್ಲ. 8 ನೇ ಪ್ರತಿವಾದಿಯ ಹೆಸರಿಗೆ ಖಾತೆ ಪಹಣಿಗಳಾದವು.

ಪ್ರತೀವರ್ಷ ಯಾರು ಉಳುಮೆ ಮಾಡುತ್ತಾರೆ ಎಂದು ಪಹಣಿಯಲ್ಲಿ ನಮೂದು ಮಾಡುತ್ತಾರೆ ಎಂದರೆ ಸರಿ. ಆ ಪ್ರಕಾರ 8 ನೇ ಪ್ರತಿವಾದಿಯ ಹೆಸರಿಗೆ ಖಾತೆ ಇದೆ ಎಂದರೆ ಸರಿ. ವಾದಿಯರಿಗೆ 8 ನೇ ಪ್ರತಿವಾದಿ ಖರೀದಿಸಿದ ಆಸ್ತಿಗಳಲ್ಲಿ ಹಕ್ಕಿಲ್ಲ ಎನ್ನುವುದು ಸರಿಯಲ್ಲ. ನನಗೆ  ಜಿಪಿ ಎಕೊಟ್ಟಾಗ ಜಮೀನು 1 ರಿಂದ 5 ನೇ ವಾದಿಯರಿಗೆ ಮತ್ತು 1 ಮತ್ತು 2 ನೇ ಪ್ರತಿವಾದಿಯರ ಹೆಸರಿನಲ್ಲಿ ಇರಲಿಲ್ಲ ಎನ್ನುವುದು ಸರಿ. ಅಕ್ರಮವಾಗಿ ಲಾಭ ಹೊಂದಲು 3 ರಿಂದ 5 ನೇ ಪ್ರತಿವಾದಿಯರನ್ನು ವಾದಿಯರು ಪಾರ್ಟಿಯನ್ನಾಗಿ ಮಾಡಿದ್ದಾರೆ ಎಂದರೆ ಸರಿಯಲ್ಲ.

ವಾದಿಯರು ಬೇರೆ ವಂಶಸ್ಥರು ಎಂದರೆ ಸರಿ. ವಾದಿಯರು ದುರ್ಗಮ್ಮನ ವಂಶಸ್ಥರಲ್ಲ ಎನ್ನುವುದು ಸರಿ. ವಾದಿಯರು ಹುಲುಗಮ್ಮನ ವಾರಸುದಾರರಲ್ಲ. ಅವರ ವಾರಸುದಾರರು ಅಲ್ಲದೇ ಇದ್ದರೂ ಸಹ ಕಾನೂನಿನ ವಿರುದ್ಧವಾಗಿ ವಾದಿಯರಿಗೆ ಯಾವುದೇ ಹಕ್ಕು ಇಲ್ಲದೇ ಇದ್ದರೂ ಸಹ ಪ್ರತಿವಾದಿಯರ ಆಸ್ತಿಗಳಲ್ಲಿ ಪಾಲು ಕೇಳುತ್ತಿದ್ದೇವೆ ಎಂದರೆ ಸರಿಯಲ್ಲ. ವಾದಿಯರಿಗೆ ಈ ದಾವೆಯನ್ನು ದಾಖಲಿಸಲು ಹಕ್ಕಿಲ್ಲ ಎಂದರೆ ಸರಿಯಲ್ಲ. ವಂಶವೃಕ್ಷವನ್ನು ಸೃಷ್ಟಿ ಮಾಡಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ನಾಗಮ್ಮ ಮತ್ತು ಲೋಕಪ್ಪ ಅಕ್ಕತಮ್ಮ. ಅವರು ಲೋಕಪ್ಪನಿಗೆ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಹುಲುಗಮ್ಮನ ಗಂಡ ದ್ಯಾವಪ್ಪ ಲೋಕಪ್ಪನ ಸಂಬಂಧಿಕರಲ್ಲ ಎಂದರೆ ಸರಿ. ದಾವಾ ಆಸ್ತಿಗಳಲ್ಲಿ ವಾದಿಯರು ಸ್ವಾಧೀನದಲ್ಲಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸ್ವಾಧೀನದಲ್ಲಿದ್ದಾರೆ ಎಂದು ನಾನು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ದ್ಯಾವಪ್ಪನಿಗೂ ಮತ್ತು 3 ನೇ ಪ್ರತಿವಾದಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿ. ಮೋಸ ಆಗಿದೆ ಎಂದು ನಾವು ಕ್ರಿಮಿನಲ್ ಮೊಕದ್ದಮೆ ಹಾಕಿಲ್ಲ. ವಾದಿಯರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಲ್ಲಿ ಗಣಕೀಕೃತ ಮಾಡಲಾಗಿದೆ.

ಓ ಹೇ ಕೇ ಸ ಇದೆ.

ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಶಿಕಾರಿಪುರ.